ಹಾಸನ ಪಟ್ಟಣದ ಒಳಚರಂಡಿ ಕಾಮಗಾರಿ ಬಗ್ಗೆ

17(150) - ಶ್ರೀ ಹೆಚ್. ಹನುಮೇಗೌಡ (ಹಾಸನ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಹಾಸನ ಪಟ್ಟಣಕ್ಕೆ ಒಳಚರಂಡಿ ಕಾಮಗಾರಿ ಕಾರ್ಯ ನಡೆಯುತ್ತಿದ್ದು, ಮುಗಿಯುವ ಹಂತಕ್ಕೆ ಬಂದಿದ್ದು, ಹಾಸನ ಪಟ್ಟಣದ ಹೊಸ ಬಡಾವಣೆಗಳಿಗೆ ಈ ಯೋಜನೆ ಕಾರ್ಯಗತ ಮಾಡಲು ನಕ್ಷೆ ಮತ್ತು ಅಂದಾಜು ಪಟ್ಟಿ ತಯಾರು ಆಗಿದೆಯೇ? (ವಿವರ ನೀಡುವುದು).

2. ಈ ಯೋಜನೆ ಯಾವಾಗ ಅಂತ್ಯಗೊಳ್ಳುತ್ತದೆ.

ಶ್ರೀ ಎಸ್.ಎಮ್. ಕೃಷ್ಣ (ಮುಖ್ಯಮಂತ್ರಿಯವರು)

1. ಹಾಸನ ನಗರದ 2ನೇ ಹಂತದ ಒಳಚರಂಡಿ ಕಾಮಗಾರಿಗಳು ಶೇ. 50 ರಷ್ಟು ಮುಗಿದಿರುತ್ತದೆ. ಉಳಿದ ಕೆಲಸಗಳು ಪ್ರಗತಿಯಲ್ಲಿದೆ.

ಹಾಸನ ನಗರದ ಹೊಸ ಬಡಾವಣೆಗಳಿಗೆ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಹೊಸದಾಗಿ ನಕ್ಷೆ ತಯಾರಿಸಲು ಕ್ರಮ ಕೈಗೊಳ್ಳಲಾಗಿದೆ. ಇದಕ್ಕಾಗಿ ಸರ್ವೆ ಮತ್ತು ನಕ್ಷೆ ತಯಾರಿಸಲು ತಗಲುವ ವೆಚ್ಚ ರೂ. 2.00 ಲಕ್ಷ ನಗರಸಭೆಯಿಂದ ಠೇವಣಿಯಾಗಬೇಕಾಗಿದೆ. ನಗರಸಭೆಯಿಂದ ಹಣಪಾವತಿಯಾದ ಕೂಡಲೇ ಮುಂದಿನ ಕ್ರಮ ಜರುಗಿಸಲಾಗುವುದು.

2. ಹಾಸನ ನಗರಸಭೆ, ಪ್ರಾಧಿಕಾರ ಹಾಗೂ ಗೃಹ ಮಂಡಲಿ ಸಂಸ್ಥೆಗಳಿಂದ ಬರಬೇಕಾದ ಹಣ ರೂ. 271.07 ಲಕ್ಷಗಳು ಬಾಕಿ ಇದ್ದು ಈ ಹಣ ಪಡೆದು, ಈಗ ಚಾಲ್ತಿಯಲ್ಲಿರುವ ಯೋಜನೆಯನ್ನು ಡಿಸೆಂಬರ್ 2003ಕ್ಕೆ ಪೂರ್ಣಗೊಳಿಸಲಾಗುವುದು.

ಹಾಸನ ಜಿಲ್ಲೆಯಲ್ಲಿ ಶರಾಬು ಅಂಗಡಿಗಳ ಬಗ್ಗೆ

18(151) - ಶ್ರೀ ಹನುಮೇಗೌಡ ಕೆ.ಹೆಚ್. (ಹಾಸನ): ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸ್ತ್ರೀ ಶಕ್ತಿ ಸ್ವ ಸಹಾಯ ಸಂಘದವರು ಹಾಸನ ಜಿಲ್ಲೆಯಲ್ಲಿ ಚಳುವಳಿ ನಡೆಸಿ, ಅಬಕಾರಿ ಇಲಾಖೆ ಮುಖಾಂತರ ತೆರೆಯುವ ಶರಾಬು ಅಂಗಡಿಗಳನ್ನು ಹಳ್ಳಿಯಿಂದ ಕನಿಷ್ಠಪಕ್ಷ ಒಂದೂವರೆ ಕಿ.ಮೀ ದೂರದ ಪ್ರದೇಶದಲ್ಲಿ ತೆರೆದು ಕುಡುಕರ ಹಾವಳಿಯಿಂದ ಹಳ್ಳಿಯವರನ್ನು ರಕ್ಷಿಸಬೇಕೆಂದು ಚಳುವಳಿ ನಡೆಸುತ್ತಿರುವುದು ನಿಜವಲ್ಲದೇ?

ಆ) ಈ ವಿಚಾರದಲ್ಲಿ ಗ್ರಾಮಾಂತರ ಪ್ರದೇಶದ ಹಳ್ಳಿಯವರು ಬೇಡಿಕೆಯನ್ನು ಈಡೇರಿಸುವುದೇ ತಿಳಿಸುವುದು?

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು)

ಅ) ಹೌದು.

ಆ) ಈ ಬಗ್ಗೆ ಪರಿಶೀಲಿಸಲಾಗುವುದು.